

ಡಾ.ವಿನೋದ ಛೆಬ್ಬಿ

**ಹೆಚ್ಚಿನವರು ತಪ್ಪು ಒಪ್ಪಿಕೊಳ್ಳುವಾಗ 'ಹೀಗೆ ಒಪ್ಪುವುದು ನನಗೆ ಒಪ್ಪಿಗೆಯಿಲ್ಲ' ಎನ್ನುವುದನ್ನೂ ಸೂಚಿಸುತ್ತ ಇರುತ್ತಾರೆ!**

# 124: ಇಳಿದಾಂಪತ್ಯದ ಬಯಕೆ–3

ಪ್ರೊ. ಧೀರೇಂದ್ರ–ಧರಿತ್ರಿ ಅವರ ಇಳಿವಯಸ್ಸಿನ ದಾಂಪತ್ಯದ ಬಗೆಗೆ ಮಾತಾಡುತ್ತಿದ್ದೇವೆ. ಧರಿತ್ರಿಗೆ ಒಂದು ಕಡೆ ಗಂಡ ತನ್ನ ವಿವಾಹಪೂರ್ವ ಪ್ರೇಮಪ್ರಕರಣದ ವಿವರಗಳನ್ನು ಬಚ್ಚಿಡುತ್ತಿದ್ದಾರೆ ಅನ್ನಿಸಿ ಜಗಳವಾಡಿದರೆ, ಇನ್ನೊಂದು ಕಡೆ ಕಾಮಕೂಟದಲ್ಲಿ ಆತ ತನಗಿಷ್ಟವಾದ ಹೆಣ್ಣನ್ನು ಕಲ್ಪಿಸಿಕೊಳ್ಳುವಾಗ ಆಕೆ ಹೆಚ್ಚು ಕಾಮತೃಪ್ತಿ ಪಡೆಯುತ್ತಾರೆ ಎಂದು ಗೊತ್ತಾಗಿದೆ.

ಧರಿತ್ರಿಯ ಅಂತರಾಳದದಲ್ಲಿ ಅಡಗಿರುವುದನ್ನು ಪತ್ತೆಮಾಡಲು ನಿರ್ಧರಿಸಿ ಆಕೆಗೆ ಕೇಳಿದೆ: 'ಪತಿಯ ಪ್ರೇಮಪ್ರಕರಣ ಮದುವೆಗೆ ಮುಂಚೆ ನಡೆದಿದ್ದು. ಯಾವೊತ್ತೋ ಮುಗಿದ ಹೆಣ್ಣಿನ ಕತೆ ಬಗೆಗೆ ನಿಮಗೆ ತಿಳಿದುಕೊಳ್ಳುವುದು ಏನಿರಬಹುದು ಎಂದು ನನಗೆ ಕುತೂಹಲ ಆಗುತ್ತಿದೆ...' ಎಂದು ಪ್ರಾರಂಭಿಸಿದೆ.

ಆಕೆ ಸ್ವಲ್ಪ ಕೆರಳಿದಂತೆ ಉತ್ತರಿಸಿದರು, 'ಅವರು ಈ ರೀತಿ ಮುಚ್ಚಿಡುತ್ತಿದ್ದರೆ ಅವರ ಮನಸ್ಸಿನೊಳಗೆ ಏನಿದೆ ಎಂದು ಹೇಗೆ ನಾನು ತಿಳಿದುಕೊಳ್ಳಲಿ?'

ನಾನು ಧೀರೇಂದ್ರರಿಗೆ ಕೇಳಿದೆ. 'ಧೀರೇಂದ್ರ, ನಿಮ್ಮ ಮುಂಚಿನ ಕಥೆಯನ್ನು ಒಂದೇ ಸಲ ಹೇಳಿದರೆ ಹೇಗಿರುತ್ತದೆ? ಉದಾಹರಣೆಗೆ, ಆ ಹುಡುಗಿ ಹೇಗೆ ಪರಿಚಯವಾದಳು ಎನ್ನುವುದರಿಂದ ಪ್ರಾರಂಭಿಸಿ, ನಿಮ್ಮಿಬ್ಬರ ನಡುವೆ ಏನೆಲ್ಲ ನಡೆಯಿತು, ಕೊನೆಗೆ ನೀವು ಆಕೆಯನ್ನು ಬಿಟ್ಟಿದ್ದು ಹೇಗೆ ಎನ್ನುವುದರ ವಿವರ ಎಲ್ಲವನ್ನೂ ಒಂದು ಸಲ ಹೇಳಿ ಮುಗಿಸಿಬಿಡಬಹುದಲ್ಲವೆ? ಸಮಯ ತೆಗೆದುಕೊಳ್ಳಿ, ಪರವಾಗಿಲ್ಲ'. ಧೀರೇಂದ್ರ ಇದನ್ನು ಎಷ್ಟೋ ಸಲ ಹೇಳಿಯಾಗಿದೆ ಎಂದು ನುಣುಚಿಕೊಳ್ಳಲು ನೋಡಿದರು. ಇನ್ನೊಂದು ಸಲ ನನ್ನೆದುರು ಹೇಳಲು ವಿನಂತಿಸಿಕೊಂಡೆ. ಅವರು ಕತೆಯನ್ನು ವಿಸ್ತಾರವಾಗಿ ನೆನಪು ಮಾಡಿಕೊಂಡರು.

ಧೀರೇಂದ್ರ ವಿವರಿಸುವಾಗ ನಾನೇನು ಮಾಡುತ್ತಿದ್ದೆ? ಅವರಿಬ್ಬರೂ ಪರಸ್ಪರ ಸಂವಹನಿಸುವ ರೀತಿಯನ್ನು ಹಾಗೂ ಮುಖಭಾವಗಳನ್ನು ಗಮನಿಸುತ್ತಿದ್ದೆ. ಗಂಡ ಹೇಳಿಕೊಂಡದ್ದು ಹೇಗಿತ್ತೆಂದರೆ ಒಲ್ಲದ ಮನಸ್ಸಿನಿಂದ ಪೊಲೀಸರ ಮುಂದೆ ಹೇಳಿಕೆ ಕೊಟ್ಟು ಪಾರಾದೆ ಎನ್ನುವಂತಿತ್ತು. ಹೇಳಿಕೆಯ ನಂತರ ಧರಿತ್ರಿ, 'ಆಕೆಯ ಜೊತೆಗೆ ಪಿಕ್ಚರ್ ನೋಡಿದ್ದು ನನಗೆ ಹೇಳಿಯೇ ಇರಲಿಲ್ಲ!" ಎಂದು ದೂರಿದರು. ಧೀರೇಂದ್ರ ನನಗೆ ಏನನ್ನೋ ಹೇಳಲು ಹೊರಟು ತೆಪ್ಪಗಾದರು. ಅವರ ಮುಖದ ಮೇಲೆ ಹತಾಶೆ ಹರಡಿತು. ಅದಕ್ಕೆ ಪ್ರತಿಯಾಗಿ ಹೆಂಡತಿ, 'ನೋಡಿದಿರಾ, ಇವರು ಯಾವಾಗಲೂ ಹೀಗೆಯೇ ಹೇಳಿ ತೆಪ್ಪಗಾಗುತ್ತಾರೆ. ನನಗಿದು ಸಹಿಸುವುದಿಲ್ಲ!' ಎಂದು ಅತೃಪ್ತಿ ತೋರಿಸಿದರು. ಇವರ ವಾದಸರಣಿಯ ಪರಿಯನ್ನು ನೋಡಿ ನನಗೇನೋ ಹೊಳೆಯಿತು. ಖಾತರಿ ಮಾಡಿಕೊಳ್ಳಲು ನಿರ್ಧರಿಸಿದೆ.

'ಧರಿತ್ರಿ, ಇಷ್ಟೊತ್ತಿನ ತನಕ ಅವರು ಹೇಳಿದ್ದು ನಿಮಗೆ ತೃಪ್ತಿಕರ ಎನ್ನಿಸಲಿಲ್ಲ, ಅಲ್ಲವೆ? (ಆಕೆ ಹೌದೆಂದು ತಲೆದೂಗಿದರು.) ಇಲ್ಲಿ ಮಾಹಿತಿ ಮುಖ್ಯವಲ್ಲ ಎನ್ನುವುದು ಮೇಲುನೋಟಕ್ಕೇ ಗೊತ್ತಾಗುತ್ತದೆ. ಅವರು ಯಾವ ರೀತಿ ತಿಳಿಸಿದ್ದರೆ ನೀವು ಮೆಚ್ಚಬಹುದಿತ್ತು?'

ಧರಿತ್ರಿ ಹೇಳಿದರು: 'ನೀವೇ ಕೇಳಿದಿರಲ್ಲ, ಅವರು ಹೇಳಿದ್ದರಲ್ಲಿ ಸ್ವಲ್ಪವಾದರೂ ಮನಸ್ಸು ಮುಟ್ಟುತ್ತದೆಯೆ ಹೇಳಿ?' ಧೀರೇಂದ್ರರಿಗೆ ಏನೇನೂ ಅರ್ಥವಾಗಲಿಲ್ಲ. ಧರಿತ್ರಿ ಹತ್ತು ನಿಮಿಷ ಹೇಳಿಕೊಂಡರು. ಅವರಿಗೆ ಬೇಕಾಗಿದ್ದುದು ಗಂಡ ಮನಸ್ಸುಬಿಚ್ಚಿ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತ, ಅದರ ಮೂಲಕ ನಾನು ಇಂಥವನು, ನಾನು ಹೀಗೆ, ಎಂದು ತೋರ್ಪಡಿಸುವುದು. ಆದರೆ ಧೀರೇಂದ್ರ ತಿಳಿಯಪಡಿಸಿದ್ದು ಘಟನೆಯ ವಿವರವೇ ವಿನಾ ಭಾವನೆಗಳಲ್ಲ! ಇದರ ಕಾರಣ ಅವರ ಬಾಲ್ಯದಲ್ಲಿತ್ತು.

ಬಾಲಕ ಧೀರನ ಬಾಲ್ಯದಲ್ಲಿ ತಾಯ್ತಂದೆಯರ ನಡುವೆ ಜಗಳಗಳು ಇಲ್ಲದಿದ್ದರೂ ಸೌಹಾರ್ದದ ಸಂಬಂಧ ಇರಲಿಲ್ಲ. ಅಪ್ಪನ ಪ್ರಾಬಲ್ಯ, ಅಮ್ಮನ ಶರಣಾಗತಿ, ಮಗನ ಬಗೆಗೆ ತಟಸ್ಥಭಾವ ಇವೇ ಮನೆಯಲ್ಲಿ ಎದ್ದುಕಾಣುತ್ತಿದ್ದುವು. ಅಷ್ಟಲ್ಲದೆ ಮಗ ಶಿಕ್ಷಣದಲ್ಲಿ ಮುಂದೆ ಬರಲು ಅತಿಯಾದ ಒತ್ತಾಯವಿತ್ತು. ಅಪ್ಪನಿಂದ ಪ್ರೀತಿ ಇಲ್ಲದಿದ್ದರೂ ಆಣತಿಯಂತೆ ನಡೆಯದಿದ್ದರೆ ಹೋಲಿಕೆ, ಟೀಕೆ, ಮೂದಲಿಕೆ ಸಾಕಷ್ಟಿತ್ತು. ಇಂಥ ವಾತಾವರಣದಲ್ಲಿ ಬಾಲಕ ಧೀರ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡಲಿಕ್ಕಾಗಲಿಲ್ಲ. ಹಾಗಾಗಿ ಮೇಲುನೋಟಕ್ಕೆ ವಿಧೇಯತೆ ತೋರಿಸುತ್ತ ಒಳಗೊಳಗೆ ಧಿಕ್ಕರಿಸುತ್ತ ಗುಮ್ಮನಗುಸಕ ಸ್ವಭಾವವನ್ನು ಬೆಳೆಸಿಕೊಂಡ. ತನಗೆ ಸರಿಬರದಿರುವಾಗ ಪ್ರಾಮಾಣಿಕವಾಗಿ ತಿಳಿಸುವುದರ ಬದಲು, ಒಪ್ಪಿಕೊಳ್ಳುವಂತೆ ವರ್ತಿಸುತ್ತ, 'ಹೀಗೆ ಒಪ್ಪುವುದು ತನಗೆ ಒಪ್ಪಿಗೆಯಿಲ್ಲ' ಎಂದು ಸೂಚಿಸುವ ನಡತೆಯನ್ನು ಕಲಿತುಕೊಂಡ. ಈ ದ್ವಂದ್ವಭಾವ ಇಷ್ಟವಾಗದೆ ತನ್ನನ್ನೇ ತಾನು ಇಷ್ಟಪಡದಿರಲು ಕಲಿತ. ತನ್ನ ನಿಜರೂಪವನ್ನು ಯಾರಾದರೂ ಕಂಡುಬಿಟ್ಟಾರು ಎಂದು ಹತ್ತಿರ ಆಗುವವರನ್ನು ದೂರವಿಡುವುದಕ್ಕಾಗಿ ಅಪಹಾಸ್ಯ ಮಾಡುವುದನ್ನು ರೂಢಿಸಿಕೊಂಡ.

ಇಲ್ಲೊಂದು ಪ್ರಶ್ನೆ: ಇಷ್ಟು ಅಪಹಾಸ್ಯ ಮಾಡುವ ವ್ಯಕ್ತಿಯು ವಿವಾಹಕ್ಕೆ ಮುಂಚೆ ಹೆಂಡತಿ ಆಗುವವಳಿಗೆ ಚಲನಚಿತ್ರಗಳ ಹಾಡುಗಳನ್ನು ಅನ್ವಯಿಸಿಕೊಂಡು ಪ್ರೇಮಪತ್ರ ಬರೆದಿದ್ದು ಹೇಗೆ? ಪ್ರಣಯಗೀತೆಗಳ ಮೂಲಕ ತೋರಿಸಿಕೊಂಡಿದ್ದು, ತನಗೆ ಇಂತಿಂಥದ್ದು ಇಷ್ಟ ಎಂದೇ ವಿನಾ ಪ್ರೇಯಸಿಯ ಕುರಿತು ಇರುವ ವೈಯಕ್ತಿಕ ಭಾವನೆಗಳಾಗಿರಲಿಲ್ಲ.

ಈಗ ಸಮಸ್ಯೆ ಸ್ಪಷ್ಟವಾಯಿತು. ಧರಿತ್ರಿ ತನ್ನ ಗಂಡನು ಬಿಚ್ಚುಮನಸ್ಸಿನಿಂದ – ಎಂಥದ್ದೇ ಇರಲಿ – ಎಲ್ಲವನ್ನೂ ಹಂಚಿಕೊಳ್ಳುವುದು ಅನ್ಯೋನ್ಯತೆಯ ಲಕ್ಷಣ ಎಂದು ಅರ್ಥಮಾಡಿಕೊಂಡಿದ್ದಾಳೆ. ಅದಕ್ಕೆ ವ್ಯತಿರಿಕ್ತವಾಗಿ, ಎಲ್ಲವನ್ನೂ ಹೇಳಿಕೊಂಡರೆ ತಾನು ಇಂಥವನು ಎಂದು ಗೊತ್ತಾಗಿ ಎಲ್ಲಿ ಸಂಬಂಧವನ್ನು ಕಳೆದುಕೊಳ್ಳುವೆನೋ ಎಂದು ಧೀರೇಂದ್ರ ಅಧೀರನಾಗಿದ್ದಾರೆ!

ಸಮಸ್ಯೆಯ ಪರಿಹಾರದ ಭಾಗವಾಗಿ ಇಬ್ಬರಿಗೂ ಪ್ರಾಮಾಣಿಕವಾಗಿ ಹಂಚಿಕೊಳ್ಳುವುದನ್ನು ಹೇಳಿಕೊಡಬೇಕಾಯಿತು. ಅದಕ್ಕಾಗಿ ಎಲೆನ್ ಬೇಡರ್ ಹಾಗೂ ಪೀಟರ್ ಪಿಯರ್ಸನ್ ಎಂಬ ದಾಂಪತ್ಯ ಚಿಕಿತ್ಸಕರು ಕಂಡುಹಿಡಿದ ನಿವೇದನಾ ಕ್ರಮವನ್ನು ಹೇಳಿಕೊಟ್ಟೆ. ಇದರಲ್ಲಿ ಮಾತಾಡುವವರು ಮನಸ್ಸು ಬಿಚ್ಚಿ ಆಡುತ್ತಾರೆ. ತಮ್ಮ ಮನದಾಳದ ಭಾವನೆ, ಅನಿಸಿಕೆಗಳನ್ನು ಒಂದೊಂದಾಗಿ ಹೊರಗೆಡಹುತ್ತಾರೆ. ಅದರೊಡನೆ ತಾನೆಂಥ ವ್ಯಕ್ತಿ ಎಂದು ತಮ್ಮನ್ನು ಕಂಡುಕೊಳ್ಳಲು ಹೊರಡುತ್ತಾರೆ. ಆಗ ಆಲಿಸುವವರು ಕುತೂಹಲದಿಂದ 'ಇದು ಸಂಗಾತಿಯ ಕಥೆ, ನನ್ನ ಸಮಸ್ಯೆಯಲ್ಲ, ಹಾಗಾಗಿ ನನಗೆ ಇದರಲ್ಲಿ ಜವಾಬ್ದಾರಿ ಇಲ್ಲ' ಎಂದು ಕಿವಿಗೊಟ್ಟು ಆಲಿಸುತ್ತಾರೆ. ಹಂಚಿಕೊಳ್ಳುವುದು, ಒಪ್ಪಿಕೊಳ್ಳುವುದು ಹಾಗೂ ಆತ್ಮಾನ್ವೇಷಣೆ – ಇವುಗಳ ಮೂಲಕ ಕ್ರಮೇಣ ಇಬ್ಬರ ನಡುವೆ ಇರುವ ಭಾವನಾತ್ಮಕ ಅಡೆತಡೆಗಳು ಮಾಯವಾಗುತ್ತ ಅನ್ಯೋನ್ಯತೆ ಹುಟ್ಟಲು ಅನುಕೂಲವಾಗುತ್ತದೆ.

ಇದರ ಪ್ರಕಾರ ಯುವಕ ಧೀರ ಮುಂಚೆ ತನ್ನ ಸ್ನೇಹಿತೆಯನ್ನು ಬಯಸಿದ ಪರಿ, ಅವಳೊಡನೆ ಆಡಿದ ಪ್ರಣಯಕೇಳಿ, ಅವಳನ್ನು ಬಿಡಬೇಕಾದಾಗ ಆದ ವಿರಹವ್ಯಥೆ – ಎಲ್ಲವನ್ನೂ ಬಾಯಿಬಿಟ್ಟು ಹೇಳುತ್ತ ಗದ್ಗದನಾದಂತೆ ಧರಿತ್ರಿ ಅಳುತ್ತ ಗಂಡನ ಕೈಹಿಡಿದುಕೊಂಡು, 'ಈಗ ನೀವೆಂಥವರು ಎನ್ನುವುದು ನನಗೆ ಅರ್ಥವಾಯಿತು!' ಎಂದು ಉದ್ಗರಿಸಿದರು.

ಅಂದಹಾಗೆ, ಕಾಮಕೂಟದಲ್ಲಿ ಧೀರೇಂದ್ರ ಇನ್ನೊಬ್ಬ ಹೆಣ್ಣನ್ನು ಕಲ್ಪಿಸಿಕೊಳ್ಳುತ್ತಿದ್ದರೆ ಧರಿತ್ರಿಗೆ ಕಾಮತೃಪ್ತಿ ಹೆಚ್ಚಾಗುತ್ತಿದ್ದುದು ಹೇಗೆ? ಹೀಗೆ ಪತಿ ಹೇಳಿಕೊಳ್ಳುವುದನ್ನು ಆಕೆ ಪರಸಂಬಂಧಕ್ಕೆ ಪ್ರಯತ್ನ ಎಂದು ಭಾವಿಸದೆ ಅತ್ಯಂತ ಆತ್ಮೀಯವಾದುದನ್ನು ಹಂಚಿಕೊಳ್ಳುವ ಪ್ರಯತ್ನ ಎಂದು ಭಾವಿಸುತ್ತಿದ್ದುದೇ ಕಾರಣ!

**ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (11ರಿಂದ ಸಂಜೆ 5ರ ತನಕ). ದಾಂಪತ್ಯ ಸಮಸ್ಯೆಗಳ ಪರಿಹಾರಕ್ಕೆ 'ಸುಧಾ'ಕ್ಕೆ ಪತ್ರ ಬರೆಯಬಹುದು.**